## ಪದ್ಯಪಾಠ ೦೧

# ಎಮ್ಮನುಡಿಗೇಳ್ ಆದಿಕವಿ ಪಂಪ

ಗದ್ಯಪಾಠಕ್ಕೆ ನಿಗದಿಪಡಿಸಿದ ಅಂಕಗಳು : ೦೪.

**ಈ ಕೆಳಗಿನ ಪ್ರಶ್ನೆಗಳಿಗೆ ಒಂದೊಂದು ಪೂರ್ಣವಾಕ್ಯದಲ್ಲಿ ಉತ್ತರ ಬರೆಯಿರಿ. (೧ ಅಂಕ)**

1. ಭೀಮನಿಗೆ ಪವನನಂದನನೆಂದು ಹೆಸರು ಬರಲು ಕಾರಣವೇನು?

   ವಾಯುವಿನ ವರಬಲದಿಂದ ಕುಂತಿಯಲ್ಲಿ ಜನಿಸಿದ್ದರಿಂದ ಭೀಮನಿಗೆ ಪವನನಂದನನೆಂದು ಹೆಸರು ಬಂತು.

2. ಘಟ ಸಂಭೂತ ಯಾರು?

   ಘಟ ಸಂಭೂತ ದ್ರೋಣಾಚಾರ್ಯ.

3. ಗಾಂಡೀವಿ ಎಂದು ಅರ್ಜುನನನ್ನು ಏಕೆ ಕರೆಯುತ್ತಾರೆ?

   ಗಾಂಡೀವ ಎಂಬ ಬಿಲ್ಲನ್ನು ಹೊಂದಿದ್ದರಿಂದ ಅರ್ಜುನನಿಗೆ ಗಾಂಡೀವಿ ಎಂದು ಕರೆಯುತ್ತಾರೆ.

4. ಪಂಪ ಭಾರತದ ಇನ್ನೊಂದು ಹೆಸರೇನು?

   ಪಂಪ ಭಾರತದ ಇನ್ನೊಂದು ಹೆಸರು ವಿಕ್ರಮಾರ್ಜುನ ವಿಜಯ

5. ದುರ್ಯೋಧನನ ತಂದೆತಾಯಿಯರ ಹೆಸರೇನು?

   ದುರ್ಯೋಧನನ ತಂದೆಯ ಹೆಸರು ಧೃತರಾಷ್ಟ್ರ. ತಾಯಿಯ ಹೆಸರು ಗಾಂಧಾರಿ.

6. ಪೆರ್ಮಾಗ ಎಂದು ಯಾರನ್ನು ಸಂಬೋಧಿಸಲಾಗಿದೆ?

   VIJAYAPUR DISTRICT KANNADA SUBJECT FORUM

   ಪೆರ್ಮಾಗ ಎಂದು ದುರ್ಯೋಧನನನ್ನು ಸಂಬೋಧಿಸಲಾಗಿದೆ.

7. ಕರ್ಣ ಯಾರ ಮಗ?

   ಕರ್ಣ ಕೂಂತಿಯ ಮಗ.

8. ಕುರುಕುಲನಂದನ ಎಂದರೆ ಯಾರು?

   ಕುರುಕುಲನಂದನ ಎಂದರೆ ದುರ್ಯೋಧನನ.

9. ಭೀಮನನ್ನು ಏನೆಂದು ಕರೆಯಲಾಗಿದೆ?

   ಭೀಮನನ್ನು ಮದಾಂಧಗಂಧಸಿಂಧುರ ಎದು ಕರೆಯಲಾಗಿದೆ.

10. ಗಾಂಧಾರಿ ಧೃತರಾಷ್ಟ್ರರು ದುರ್ಯೋಧನನಲ್ಲಿಗೆ ಏತಕ್ಕೆ ಹೋಗಿದ್ದರು?

    ಗಾಂಧಾರಿ ಧೃತರಾಷ್ಟ್ರರು ದುರ್ಯೋಧನನಲ್ಲಿಗೆ ಉಳಿದಿರುವ ಒಬ್ಬ ಮಗನನ್ನಾದರೂ ಉಳಿಸಿಕೊಳ್ಳಬೇಕೆಂದು ಹೋಗಿದ್ದರು.

**ಈ ಕೆಳಗಿನ ಹೇಳಿಕೆಗೆ ಸಂದರ್ಭ ಮತ್ತು ಸ್ವಾರಸ್ಯಗಳನ್ನು ಬರೆಯಿರಿ**. (**೩ ಅಂಕಗಳು**)

1. "ಎನಗಂ ಪಾಂಡುಗಮಿಲ್ಲ ಭೇದಂ"

   **ಆಯ್ಕೆ** : ಈ ವಾಕ್ಯವನ್ನು ಡಿ. ಎಲ್. ನರಸಿಂಹಾಚಾರ್ಯರು ಸಂಪಾದಿಸಿರುವ "ಆದಿಕವಿ ಪಂಪ" ಅವರು ರಚಿಸಿರುವ "ವಿಕ್ರಮಾರ್ಜುನ ವಿಜಯ" ಕೃತಿಯಿಂದ ಆಯ್ದು "ಎಮ್ಮನುಡಿಗೇಳ್" ಎಂಬ

ಪದ್ಯಪಾಠದಿಂದ ಆಯ್ದುಕೊಳ್ಳಲಾಗಿದೆ.

**ಸಂದರ್ಭ** : ದುರ್ಯೋಧನನು ತಂದೆ ತಾಯಿಗಳಿಗೆ ನಮ್ಸ್ಕರಿಸಿದ ನಂತರ ಧೃತರಾಷ್ಟ್ರನು ದುರ್ಯೋಧನನಿಗೆ ಸಂಧಿ ಕಾರ್ಯಕ್ಕೆ ಒಪ್ಪಿಕೊಳ್ಳುವಂತೆ ಒತ್ತಾಯಿಸುತ್ತ ಈ ಮಾತನ್ನು ಹೇಳುತ್ತಾನೆ.

**ಸ್ವಾರಸ್ಯ** : ಪುತ್ರನ ಮೇಲಿನ ಮೋಹದಿಂದ ಬದುಕುಳಿದ ಒಬ್ಬನನ್ನಾದರೂ ಉಳಿಸಿಕೊಳ್ಳುವ ಹಂಬಲದಿಂದ "ನಮ್ಮಲ್ಲಿ (ಪಾಂಡುವಿನಲ್ಲಿ) ಭೇದವಿಲ್ಲ. ಈಗಲಾದರೂ ಸಹ ರಾಜ್ಯವನ್ನು ಹಂಚಿಕೊಂಡು ಆಳಬಹುದು" ಎಂದು ಸ್ವಾರಸ್ಯಪೂರ್ಣವಾಗಿ ಹೇಳಿದೆ.

2. "ಈ ಕಲಹಮುಂ ನಿನ್ನಿಂದಮಾಯ್ತೆಂದೊಡಿಂ ಮುನಿವೈ"

**ಆಯ್ಕೆ** : ಈ ವಾಕ್ಯವನ್ನು ಡಿ. ಎಲ್. ನರಸಿಂಹಾಚಾರ್ಯರು ಸಂಪಾದಿಸಿರುವ "ಆದಿಕವಿ ಪಂಪ" ಅವರು ರಚಿಸಿರುವ "ವಿಕ್ರಮಾರ್ಜುನ ವಿಜಯ" ಕೃತಿಯಿಂದ ಆಯ್ದ "ಎಮ್ಮನುಡಿಗೇಳ್" ಎಂಬ ಪದ್ಯಪಾಠದಿಂದ ಆಯ್ದುಕೊಳ್ಳಲಾಗಿದೆ.

**ಸಂದರ್ಭ** : ಧೃತರಾಷ್ಟ್ರನು ದುರ್ಯೋಧನನಿಗೆ ಎನಗೂ ಪಾಂಡುವಿಗೂ ಭೇದವಿಲ್ಲ. ರಾಜ್ಯವನ್ನು ಹಂಚಿಕೊಂಡು ಆಳೋಣ ಎಂದು ಹೇಳುವ ಸಂದರ್ಭದಲ್ಲಿ ಈ ಮಾತು ಬಂದಿದೆ.

**ಸ್ವಾರಸ್ಯ** : ಪುತ್ರವ್ಯಾಮೋಹಿಯಾದ ಧೃತರಾಷ್ಟ್ರನು ಯುದ್ಧವನ್ನು ನಿಲ್ಲಿಸುವ ಉದ್ದೇಶದಿಂದ ಮಗನಿಗೆ ಬುದ್ಧಿವಾದ ಹೇಳುತ್ತ "ಕಲಹವು ನಿನ್ನಿಂದಲೇ ನಡೆದಿದೆ. ಇದನ್ನು ಹೇಳಿದರೆ ನೀನು ಕೋಪಿಸಿಕೊಳ್ಳುವಿ" ಎಂದು ಸ್ವಾರಸ್ಯಪೂರ್ಣವಾಗಿ ಹೇಳಿದೆ.

3. "ಪಗೆಗೆ ಕಣಿಯೊಂದುಂಟೇ"

VIJAYAPUR DISTRICT KANNADA SUBJECT FORUM

**ಆಯ್ಕೆ** : ಈ ವಾಕ್ಯವನ್ನು ಡಿ. ಎಲ್. ನರಸಿಂಹಾಚಾರ್ಯರು ಸಂಪಾದಿಸಿರುವ "ಆದಿಕವಿ ಪಂಪ" ಅವರು ರಚಿಸಿರುವ "ವಿಕ್ರಮಾರ್ಜುನ ವಿಜಯ" ಕೃತಿಯಿಂದ ಆಯ್ದ "ಎಮ್ಮನುಡಿಗೇಳ್" ಎಂಬ ಪದ್ಯಪಾಠದಿಂದ ಆಯ್ದುಕೊಳ್ಳಲಾಗಿದೆ.

**ಸಂದರ್ಭ** : ಧೃತರಾಷ್ಟ್ರನು ದುರ್ಯೋಧನನನ್ನು ಕುರಿತು ಸಂಧಿ ಕಾರ್ಯಕ್ಕೆ ಒಪ್ಪಿಕೊಳ್ಳುವಂತೆ ಒತ್ತಾಯಿಸುತ್ತ ವೈರತ್ವ ಸಾಧಿಸುವುದು ಶ್ರೇಯಸಲ್ಲ ಎಂದು ಹೇಳುವ ಸಂದರ್ಭದಲ್ಲಿ ಈ ಮಾತು ಬಂದಿದೆ.

**ಸ್ವಾರಸ್ಯ** : ತಂದೆಯು ಮಗನನ್ನು ಕುರಿತು "ದ್ವೇಷಕ್ಕೊಂದು ಸ್ಥಳ, ಬಾಂಧವ್ಯಕ್ಕೊಂದು ಸ್ಥಳ ಇರುವುದಿಲ್ಲ. ಆಲೋಚಿಸಿ ನೋಡು" ಎಂದು ಸ್ವಾರಸ್ಯಪೂರ್ಣವಾಗಿ ಹೇಳಿದೆ.

4. "ಪಗೆಯುಂ ನಣ್ಪುಂ ಕೈಕೊಂಡ ಕಜ್ಜದಿನಲ್ತೆ"

**ಆಯ್ಕೆ** : ಈ ವಾಕ್ಯವನ್ನು ಡಿ. ಎಲ್. ನರಸಿಂಹಾಚಾರ್ಯರು ಸಂಪಾದಿಸಿರುವ "ಆದಿಕವಿ ಪಂಪ" ಅವರು ರಚಿಸಿರುವ "ವಿಕ್ರಮಾರ್ಜುನ ವಿಜಯ" ಕೃತಿಯಿಂದ ಆಯ್ದ "ಎಮ್ಮನುಡಿಗೇಳ್" ಎಂಬ ಪದ್ಯಪಾಠದಿಂದ ಆಯ್ದುಕೊಳ್ಳಲಾಗಿದೆ.

**ಸಂದರ್ಭ** : ಧೃತರಾಷ್ಟ್ರನು ದುರ್ಯೋಧನನನ್ನು ಕುರಿತು ಸಂಧಿ ಕಾರ್ಯಕ್ಕೆ ಒಪ್ಪಿಕೊಳ್ಳುವಂತೆ ಒತ್ತಾಯಿಸುತ್ತ ವೈರತ್ವ ಸಾಧಿಸುವುದು ಶ್ರೇಯಸಲ್ಲ ಎಂದು ಹೇಳುವ ಸಂದರ್ಭದಲ್ಲಿ ಈ ಮಾತು ಬಂದಿದೆ.

**ಸ್ವಾರಸ್ಯ** : ತಂದೆಯು ಮಗನನ್ನು ಕುರಿತು "ದ್ವೇಷಕ್ಕೊಂದು ಸ್ಥಳ, ಬಾಂಧವ್ಯಕ್ಕೊಂದು ಸ್ಥಳ ಇರುವುದಿಲ್ಲ. ರಾಜರುಗಳಿಗೆ ಹಗೆತನ ಹಾಗೂ ಬಾಂಧವ್ಯಗಳು ಅವರು ಮಾಡಿದ ಕೆಲಸದಿಂದ ಉಂಟಾಗುತ್ತವೆ ಹಗೆತನದ ನಾಶಕ್ಕೆ ಮಿತ್ರ ಕಾರ್ಯವೇ ಶ್ರೇಷ್ಠ ಎಂದು ಅರ್ಥಶಾಸ್ತ್ರದಲ್ಲಿ ಸ್ವಾರಸ್ಯಪೂರ್ಣವಾಗಿ ಹೇಳಿದೆ." ಎಂದನು.

5. “ಪಗಲೆನಿತಾನುಂ ದೀವಿಗೆಗಳುರಿದೊಡೇಮ್"

**ಆಯ್ಕೆ** : ಈ ವಾಕ್ಯವನ್ನು ಡಿ. ಎಲ್. ನರಸಿಂಹಾಚಾರ್ಯರು ಸಂಪಾದಿಸಿರುವ "ಆದಿಕವಿ ಪಂಪ" ಅವರು ರಚಿಸಿರುವ "ವಿಕ್ರಮಾರ್ಜುನ ವಿಜಯ" ಕೃತಿಯಿಂದ ಆಯ್ದ "ಎಮ್ಮನುಡಿಗೇಳ್" ಎಂಬ ಪದ್ಯಪಾಠದಿಂದ ಆಯ್ದುಕೊಳ್ಳಲಾಗಿದೆ.

**ಸಂದರ್ಭ** : ಧೃತರಾಷ್ಟನು ದುರ್ಯೋಧನನಿಗೆ ಸಂಧಿ ಮಾಡಿಕೊಳ್ಳುವಂತೆ ಒತ್ತಾಯಪಡಿಸುತ್ತ ಯುದ್ಧವನ್ನು ನಿಲ್ಲಿಸುವಂತೆ ಕೇಳಿಕೊಳ್ಳುವ ಸಂದರ್ಭದಲ್ಲಿ ಈ ಮಾತು ಬಂದಿದೆ.

**ಸ್ವಾರಸ್ಯ** : ತಂದೆಯು "ಮಗನೇ ನೀನು ಇದ್ದರೆ ಉಳಿದೆಲ್ಲ ಮಕ್ಕಳಿದ್ದಂತೆ, ನಮಗೆ ಯಾವ ದುಃಖವೂ ಇಲ್ಲ. ಅದು ಹೇಗೆಂದರೆ ಸೂರ್ಯನ ಬೆಳಕಿನ ಮುಂದೆ ದೀಪಗಳ ಬೆಳಕು ಗೌಣ. ಹಾಗೆ ನೀನು" ಎಂದು ಸ್ವಾರಸ್ಯಪೂರ್ಣವಾಗಿ ಹೇಳಿದೆ.

6. ಪರ್ಮರನುಟಿವಂತೆ ನೀನುಟಿದೆ.”

**ಆಯ್ಕೆ** : ಈ ವಾಕ್ಯವನ್ನು ಡಿ. ಎಲ್. ನರಸಿಂಹಾಚಾರ್ಯರು ಸಂಪಾದಿಸಿರುವ "ಆದಿಕವಿ ಪಂಪ" ಅವರು ರಚಿಸಿರುವ "ವಿಕ್ರಮಾರ್ಜುನ ವಿಜಯ" ಕೃತಿಯಿಂದ ಆಯ್ದ "ಎಮ್ಮನುಡಿಗೇಳ್" ಎಂಬ ಪದ್ಯಪಾಠದಿಂದ ಆಯ್ದುಕೊಳ್ಳಲಾಗಿದೆ.

**ಸಂದರ್ಭ** : ಗಾಂಧಾರಿಯು ಪತಿಯ ಮಾತಿಗೆ ಪುಷ್ಠಿ ನೀಡುತ್ತ ಮಗನಿಗೆ ಬುದ್ಧಿವಾದ ಹೇಳುವ ಸಂದರ್ಭದಲ್ಲಿ ಈ ಮಾತು ಬಂದಿದೆ.

VIJAYAPUR DISTRICT KANNADA SUBJECT FORUM

**ಸ್ವಾರಸ್ಯ** : ಗಾಂಧಾರಿಯು ಮಗನನ್ನು ಕುರಿತು "ಮದವೇರಿದ ಆನೆಯು ವನವನ್ನು ನುಗ್ಗಿ ಧ್ವಂಸ ಮಾಡಿದಂತೆ ಭೀಮನು ನಿನ್ನ ಸೈನ್ಯವನ್ನು ನುಗ್ಗಿ ಧ್ವಂಸ ಮಾಡಿದ್ದಾನೆ. ಪುಣ್ಯಕ್ಕೆ ವನದಲ್ಲಿಯ ದೊಡ್ಡ ಮರ ಉಳಿಯುವಂತೆ ನೀನುಳಿದಿರುವೆ ಆದ್ದರಿಂದ ತಂದೆಯ ಮಾತಿಗೆ ಒಪ್ಪಿಕೋ" ಎಂದು ಸ್ವಾರಸ್ಯಪೂರ್ಣವಾಗಿ ಹೇಳಿದ್ದಾಳೆ.

7. "ಎಮ್ಮನುಡಿಗೇಳ್"

**ಆಯ್ಕೆ** : ಈ ವಾಕ್ಯವನ್ನು ಡಿ. ಎಲ್. ನರಸಿಂಹಾಚಾರ್ಯರು ಸಂಪಾದಿಸಿರುವ "ಆದಿಕವಿ ಪಂಪ" ಅವರು ರಚಿಸಿರುವ "ವಿಕ್ರಮಾರ್ಜುನ ವಿಜಯ" ಕೃತಿಯಿಂದ ಆಯ್ದ "ಎಮ್ಮನುಡಿಗೇಳ್" ಎಂಬ ಪದ್ಯಪಾಠದಿಂದ ಆಯ್ದುಕೊಳ್ಳಲಾಗಿದೆ.

**ಸಂದರ್ಭ** : ಗಾಂಧಾರಿಯು ಪತಿಯ ಮಾತಿಗೆ ಪುಷ್ಠಿ ನೀಡುತ್ತ ಮಗನಿಗೆ ಬುದ್ಧಿವಾದ ಹೇಳುವ ಸಂದರ್ಭದಲ್ಲಿ ಈ ಮಾತು ಬಂದಿದೆ.

**ಸ್ವಾರಸ್ಯ** : ಗಾಂಧಾರಿಯು ಮಗನನ್ನು ಕುರಿತು "ಮದವೇರಿದ ಆನೆಯು ವನವನ್ನು ನುಗ್ಗಿ ಧ್ವಂಸ ಮಾಡಿದಂತೆ ಭೀಮನು ನಿನ್ನ ಸೈನ್ಯವನ್ನು ನುಗ್ಗಿ ಧ್ವಂಸ ಮಾಡಿದ್ದಾನೆ. ಪುಣ್ಯಕ್ಕೆ ವನದಲ್ಲಿಯ ದೊಡ್ಡ

ಮರ ಉಳಿಯುವಂತೆ ನೀನುಳಿದಿರುವೆ ಆದ್ದರಿಂದ ತಂದೆಯ ಮಾತಿಗೆ ಒಪ್ಪಿಕೋ ನಮ್ಮ ಮಾತನ್ನು ಕೇಳು" ಎಂದು ಸ್ವಾರಸ್ಯಪೂರ್ಣವಾಗಿ ಹೇಳಿದ್ದಾಳೆ.

**ಈ ಕೆಳಗಿನ ಸಾಹಿತಿ / ಕವಿಗಳ ಸ್ಥಳ, ಕಾಲ, ಕೃತಿ, ಪ್ರಶಸ್ತಿ/ ಬಿರುದುಗಳನ್ನು ಕುರಿತು ವಾಕ್ಯರೂಪದಲ್ಲಿ ಬರೆಯಿರಿ : (೩ ಅಂಕಗಳು)**

1. ಆದಿಕವಿ ಪಂಪ

ಆದಿಕವಿ ಪಂಪನ ಕಾಲ ಕ್ರಿ.ಶ. ಸುಮಾರು 941. ಈತನ ಸ್ಥಳ ವೆಂಗಿಮಂಡಲದ ವೆಂಗಿಪಳು ಎಂಬ ಅಗ್ರಹಾರ. ಚಾಲುಕ್ಯರ ಅರಿಕೇಸರಿಯ ಆಸ್ಥಾನಕವಿಯಾಗಿದ್ದ ಈತ ಆದಿಪುರಾಣ ಮತ್ತು ವಿಕ್ರಮಾರ್ಜುನ ವಿಜಯ ಎಂಬ ಮಹಾಕಾವ್ಯಗಳನ್ನು ರಚಿಸಿದ್ದಾನೆ ರತ್ನತ್ರಯರಲ್ಲಿ ಒಬ್ಬನಾದ ಈತನಿಗೆ ಸರಸ್ವತೀ ಮಣಿಹಾರ, ಸಂಸಾರ ಸಾರೋದಯ, ಕವಿತಾ ಗುಣಾರ್ಣವ ಎಂಬ ಬಿರುದುಗಳಿವೆ.

**ಈ ಕೆಳಗಿನ ಪದ್ಯಭಾಗವನ್ನು ಪೂರ್ಣಗೊಳಿಸಿರಿ : (೪ ಅಂಕಗಳು)**

1. ನೀನುಳ್ದೊಡೆಲ್ಲರೊಳರೆಮ
ಗೇನುಮಟಿಲ್ ಮನದೊಳಿಲ್ಲದೆಂತೆನೆ ಮಗನೇ |
ಭಾನುವೆ ಸಾಲದೆ ಪಗಲೆನಿ
ತಾನುಂ ದೀವಿಗಗಳುರಿದೊಡೇಂ ನಂದಿದೊಡೇಂ ||

**ಅಥವಾ**

ಕುರುಕುಲ ನಂದನಂ ಪವನನಂದನನೆಂಬ ಮದಾಂಧಗಂಧಸಿಂ
ಧುರಮೆ ಕಟುತ್ತು ಪಾಯ್ವ ಪಡಲಿಟ್ಟುವೊಲಾದುದು ಪುಣ್ಯದೊಂದು ಪೆ
ರ್ಮರನುಟಿವಂತೆ ನೀನುಟಿದೆಯಿನ್ನಿಟಿವನ್ನರುಮಿಲ್ಲ ಮುತ್ತರುಂ
ಕುರುಡರುಮೆನ್ನದೆಮ್ಮ ನುಡಿಗೇಳ್ ಮಗನೇ ಬಗೆ ತಂದೆಗಿಂಬುಕೆಯ್

VIJAYAPUR DISTRICT KANNADA SUBJECT FORUM

**ಈ ಕೆಳಗಿನ ಪದ್ಯಭಾಗವನ್ನು ಓದಿ ಅರ್ಥಮಾಡಿಕೊಂಡು, ಅಡಕವಾಗಿರುವ ಮೌಲ್ಯವನ್ನಾಧರಿಸಿ ಸಾರಾಂಶ ಬರೆಯಿರಿ : (೪ ಅಂಕಗಳು)**

1. ಎನಗಂ ಪಾಂಡುಗಮಿಲ್ಲ ಭೇದ ಮಿಳೆಯಂ ಪಚ್ಚಾಳ್ವಮಾ ಪಾಂಡುನಂ
ದನರುಂ ಸೈದರೆ ನಿನ್ನೊಳೇ ಕಲಹಮುಂ ನಿನ್ನಿಂದಮಾಯ್ತೆಂದೊಡಿಂ |
ಮುನಿವೈ ಗಂಗೆಯ ಪೆರ್ಮಗಂಗೆ ಘಟಸಂಭೂತಂಗೆ ಕರ್ಣಂಗಸಾ
ಧ್ಯನೊಳಾ ಗಾಂಡಿವಿಯೊಳ್ ಕಱುತ್ತಿಱಿವರಾರಿಂ ಮಾಡುವಂ ಸಂಧಿಯಂ ||

"ಪುತ್ರಶೋಕನಿರಂತರಂ' ಎಂಬ ಮಾತಿನಂತೆ ಧೃತರಾಷ್ಟ್ರ ಹಾಗೂ ಗಾಂಧಾರಿಯರು ತೊಂಬತ್ತೊಂಬತ್ತು ಮಕ್ಕಳನ್ನು ಕಳೆದುಕೊಂಡ ದುಃಖವಿದ್ದರೂ ಸಹ ಉಳಿದ ಒಬ್ಬ ಮಗನನ್ನಾದರೂ ಬದುಕಿಸಿಕೊಳ್ಳಬೇಕೆಂಬ ಮಹಾದಾಸೆಯಿಂದ ರಣರಂಗವನ್ನು ಪ್ರವೇಶ ಮಾಡಿದ ರೀತಿ, ಪಾಂಡವರು

ಪರಾಕ್ರಮಶಾಲಿಗಳು ಅವರನ್ನು ಎದುರಿಸುವ ಶಕ್ತಿ ಇಲ್ಲ ಇದ್ದರೂ ಯುದ್ಧ ಬೇಡ ಅದನ್ನು ನಿಲ್ಲಿಸಿ ಸಂಧಿ ಮಾಡಿಕೊಂಡರೆ ಒಳ್ಳೆಯದೆಂಬ ಮೌಲ್ಯ ಇದರಲ್ಲಿದೆ.

ಧೃತರಾಷ್ಟ್ರನು ದುರ್ಯೋಧನನನಿಗೆ "ಎನಗೂ ಪಾಂಡುರಾಜನಿಗೂ ಭೇದವಿಲ್ಲ. ಈ ರಾಜ್ಯವನ್ನು ಹಂಚಿಕೊಂಡು ಆಳ್ವಿಕೆ ಮಾಡೋಣ. ಪಾಂಡುನಂದನರು ನಿನ್ನೊಂದಿಗೆ ಹೊಂದಿಕೊಳ್ಳುವರು. ನಿನ್ನಿಂದಲೇ ಈ ಕಲಹವು. ಇದನ್ನು ಹೇಳಿದರೆ ನೀನು ಕೋಪಿಸಿಕೊಳ್ಳುತ್ತೀಯ. ಗಂಗೇಯ ಹಿರಿಯ ಮಗನಾದ ಭೀಷ್ಮನಿಗೆ, ಘಟಸಂಭೂತನಾದ ದ್ರೋಣರಿಗೆ, ವೀರ ಕರ್ಣನಿಗೆ ಅಸಾಧ್ಯನಾದವನು ಅರ್ಜುನ. ಆತನೊಡನೆ ಕೋಪಿಸಿಕೊಂಡು ವೀರಾವೇಶದಿಂದ ಹೋರಾಡುವವರು ಯಾರು ಇಲ್ಲ. ಕಾರಣ ಸಂಧಿಯನ್ನು ಮಾಡಿಕೊಳ್ಳೋಣ" ಎಂದು ಹೇಳುವನು.

2. ಪಗೆಗೆ ಕಣೆಯೊಂದುಂಟೇ ನಣ್ಪಿಂಗಮಾಗರಮುಂಟೆ ನೀಂ
ಬಗೆಯ ಪಗೆಯುಂ ನಣ್ಪುಂ ಕಯ್ಕೊಂಡ ಕಜ್ಜದನಲ್ತೆ ಪು |
ಟ್ಟುಗುಮರಸುಗಳ್ಗಿಂದೀ ಸಂದರ್ಥಶಾಸ್ತ್ರದೊಳೇಕೆ ಪೇಟ್
ಮಗನೆ ನೆಗಟ್ಟೈ ಕಾರ್ಯಂ ಮಿತ್ರಾದಿ ಕಾರಕಮೆಂಬುದುಂ

ವೈರತ್ವಕ್ಕೆ ಆಗರವಿಲ್ಲ, ವೈರಿಯನ್ನು ಮಿತ್ರನಂತೆ ಭಾವಿಸಬೇಕೆಂಬ ಹಿರಿಯರ ಮಾತು ಸತ್ಯವಾದದ್ದು, ದಂಡನೀತಿ ಶಾಸ್ತ್ರದಲ್ಲಿ ಹೇಳಿದಂತೆ ರಾಜರು ಕೈಗೊಳ್ಳುವ ಕಾರ್ಯದ ಮೇಲೆ ಅವರ ವ್ಯಕ್ತಿತ್ವ ಬೆಳೆಯುವುದು ಎಂಬ ಮೌಲ್ಯ ಇದರಲ್ಲಿದೆ.

ಧೃತರಾಷ್ಟ್ರನು ದುರ್ಯೋಧನನನ್ನು ಕುರಿತು "ವೈರತ್ವಕ್ಕೊಂದು ಆಶ್ರಯ, ನಂಟಸ್ತಿಕೆಗೊಂದು ಆಶ್ರಯ ಇಲ್ಲ. ದಂಡನೀತಿ ಶಾಸ್ತ್ರದಲ್ಲಿ ಹೇಳಿರುವಂತೆ ಅರಸರು ಮಾಡಿದ ಕಾರ್ಯದಿಂದ ಶತ್ರುಗಳು ಬಂಧುಗಳು ಹುಟ್ಟುತ್ತಾರೆ. ಆದ್ದರಿಂದ ಪಾಂಡವರನ್ನು ಶತ್ರುಗಳನ್ನಾಗಿ ಮಾಡಿಕೊಳ್ಳುವುದಕ್ಕಿಂತ ಮಿತ್ರರನ್ನಾಗಿ ಮಾಡಿಕೊಳ್ಳುವುದು ನಿನ್ನ ಕೈಯಲ್ಲಿದೆ. ವಿಚಾರಮಾಡಿನೋಡು. ಅವರೊಂದಿಗೆ ಯುದ್ಧ ಮಾಡುವುದನ್ನು ನಿಲ್ಲಿಸು" ಎಂದು ಹೇಳುತ್ತಾನೆ.

VIJAYAPUR DISTRICT KANNADA SUBJECT FORUM

3. ನೀನುಳ್ಳೊಡೆಲ್ಲರೊಳರೆಮ
ಗೇನುಮಟಿಲ್ ಮನದೊಳಿಲ್ಲದೆಂತೆನೆ ಮಗನೇ |
ಭಾನುವೆ ಸಾಲದೆ ಪಗಲೆನಿ
ತಾನುಂ ದೀವಿಗೆಗಳುರಿದೊಡೇಂ ನಂದಿದೊಡೇಂ ||

ಧೃತರಾಷ್ಟ್ರನು ಯುದ್ಧದಲ್ಲಿ ಮಡಿದ ಮಕ್ಕಳ ದುಃಖವನ್ನು ಮರೆತು, ಉಳಿದಿರುವ ಒಬ್ಬ ಮಗನನ್ನಾದರೂ ಬದುಕಿಸಿಕೊಳ್ಳಬೇಕೆಂಬ ಪುತ್ರವ್ಯಾಮೋಹ , ವಾತ್ಸಲ್ಯ, ಹಿರಿಯ ಮಗನಲ್ಲಿ ಉಳಿದವರ ದುಃಖವನ್ನು ಮರೆಯುವ ಭಾವ, ಇತ್ಯಾದಿ ಮೌಲ್ಯಗಳು ಇದರಲ್ಲಿವೆ.

ಧೃತರಾಷ್ಟ್ರನು ದುರ್ಯೋಧನನನ್ನು ಕುರಿತು "ಮಗನೇ, ನೀನೊಬ್ಬನಿದ್ದರೆ ನಮಗೆ ಎಲ್ಲರೂ ಇದ್ದಂತೆ, ಉಳಿದ ಮಕ್ಕಳನ್ನು ನಿನ್ನ ಬದುಕಿನಲ್ಲಿ ಕಾಣುತ್ತೇವೆ. ಅವರ ಮರಣದಿಂದ ನಮಗೆ ಯಾವ ದುಃಖವೂ ಮನದಲ್ಲಿ ಇಲ್ಲ, ಅದು ಹೇಗೆಂದರೆ ಹಗಲಿನಲ್ಲಿಯ ಸುರ್ಯನ ಬೆಳಕಿನ ಮುಂದೆ ಎಷ್ಟೇ

ದೀಪಗಳು ಉರಿದರೂ ಅಷ್ಟೇ, ಉರಿಯದಿದ್ದರೂ ಅಷ್ಟೇ, ಅವುಗಳ ಬೆಳಕು ಸೂರ್ಯನ ಮುಂದೆ ಗೌಣ. ಅದರಂತೆ ನೀನು" ಎಂದು ಹೇಳುವನು.

4. ಕುರುಕುಳನಂದನಂ ಪವನನಂದನನೆಂಬ ಮದಾಂಧಗಂಧಸಿಂ
ಧುರಮೆ ಕಱತ್ತು ಪಾಯೆ ಪಡಲಿಟ್ಟವೊಲಾದುದು ಪುಣ್ಯದೊಂದು ಪೆ |
ರ್ಮರನುೞವಂತೆ ನೀನುೞದೆಯಿನ್ನಿೞವನ್ನರುಮಿಲ್ಲ ಮುತ್ತರುಂ
ಕುರುಡರುಮೆನ್ನದೆಮ್ಮ ನುಡಿಗೇಳ್ ಮಗನೇ ಬಗೆ ತಂದೆಗಿಂಬುಕೆಯ್ ||

ಈ ಪದ್ಯದಲ್ಲಿ ಗಾಂಧಾರಿಯು ಮಗನ ಮೇಲಿನ ಮೋಹದಿಂದ ಇವನೊಬ್ಬನನ್ನಾದರೂ ಉಳಿಸಿಕೊಳ್ಳಬೇಕೆಂಬ ಹಂಬಲದಿಂದ ಆತನಿಗೆ ತಿಳಿ ಹೇಳುವ, ತಂದೆ ತಾಯಿಗಳ ಮಾತನ್ನು ಪಾಲಿಸಬೇಕೆಂಬ ಹಾಗೂ ಯುದ್ಧ, ದ್ವೇಷ ಅಸೂಯೆ, ಕೀರ್ತಿಯ ಬೆನ್ನು ಹಿಡಿದು ಹೋದರೆ ಎಂತಹ ಪರಿಣಾಮ ಎದುರಿಸಬೇಕಾಗುತ್ತದೆಂಬ ಮೌಲ್ಯ ಇದರಲ್ಲಿದೆ.

ಗಾಂಧಾರಿಯು ದುರ್ಯೋಧನನಿಗೆ "ಮಗನೇ, ಕೌರವ ವಂಶವೆಂಬ ತೋಟವು ಭೀಮನೆಂಬ ಮದದಿಂದ ಸೊಕ್ಕೇರಿದ ಆನೆಯು ಕೋಪದಿಂದ ನುಗ್ಗಿ ತೋಟವನ್ನೆಲ್ಲ ಹಾಳುಮಾಡಿದಂತಾಯಿತು. ಪುಣ್ಯಕ್ಕೆ ತೋಟದಲ್ಲಿಯ ದೊಡ್ಡ ಮರನುಳಿಯುವಂತೆ ನೀನು ಬದುಕಿದ್ದೀಯ. ಇದು ನಮ್ಮ ಪುಣ್ಯ. ಇನ್ನು ಅವರೊಂದಿಗೆ ಹೋರಾಡುವಂತಹ ವೀರ ಯೋಧರು ಯಾರೂ ಇಲ್ಲ, ಕಾರಣ ನಮ್ಮನ್ನು ಮುದುಕರು, ಕುರುಡರು ಎನ್ನದೆ ನಮ್ಮ ಮಾತನ್ನು ಕೇಳು, ತಂದೆಯ ಮಾತಿಗೆ ಬೆಂಬಲ ಕೊಡು" ಎಂದು ಬುದ್ಧಿವಾದ ಹೇಳಿದಳು.

VIJAYAPUR DISTRICT KANNADA SUBJECT FORUM

**ಈ ಕೆಳಗಿನ ಪ್ರಶ್ನೆಗಳಿಗೆ ಎಂಟು – ಹತ್ತು ವಾಕ್ಯಗಳಲ್ಲಿ ಉತ್ತರ ಬರೆಯಿರಿ : (೪ ಅಂಕಗಳು)**

1. ಧೃತರಾಷ್ಟ್ರನು ಸಂಧಿಮಾಡಿಕೋ ಎಂದು ದುರ್ಯೋಧನನಿಗೆ ಹೇಳಲು ಕಾರಣವೇನು?

ಧೃತರಾಷ್ಟ್ರನು ದುರ್ಯೋಧನನನಿಗೆ "ಎನಗೂ ಪಾಂಡುರಾಜನಿಗೂ ಭೇದವಿಲ್ಲ. ಈ ರಾಜ್ಯವನ್ನು ಹಂಚಿಕೊಂಡು ಆಳ್ವಿಕೆ ಮಾಡೋಣ. ಪಾಂಡುನಂದನರು ನಿನ್ನೊಂದಿಗೆ ಹೊಂದಿಕೊಳ್ಳುವರು. ನಿನ್ನಿಂದಲೇ ಈ ಕಲಹವು. ಇದನ್ನು ಹೇಳಿದರೆ ನೀನು ಕೋಪಿಸಿಕೊಳ್ಳುತ್ತೀಯ. ಗಂಗೇಯ ಹಿರಿಯ ಮಗನಾದ ಭೀಷ್ಮನಿಗೆ, ಘಟಸಂಭೂತನಾದ ದ್ರೋಣರಿಗೆ, ವೀರ ಕರ್ಣನಿಗೆ ಅಸಾಧ್ಯನಾದವನು ಅರ್ಜುನ. ಆತನೊಡನೆ ಕೋಪಿಸಿಕೊಂಡು ವೀರಾವೇಶದಿಂದ ಹೋರಾಡುವವರು ಯಾರು ಇಲ್ಲ. ಕಾರಣ ಸಂಧಿಯನ್ನು ಮಾಡಿಕೊಳ್ಳೋಣ.

ವೈರತ್ವಕ್ಕೊಂದು ಆಶ್ರಯ, ನಂಟಸ್ಥಿಕೆಗೊಂದು ಆಶ್ರಯ ಇಲ್ಲ. ದಂಡನೀತಿ ಶಾಸ್ತ್ರದಲ್ಲಿ ಹೇಳಿರುವಂತೆ ಅರಸರು ಮಾಡಿದ ಕಾರ್ಯದಿಂದ ಶತ್ರುಗಳು ಬಂಧುಗಳು ಹುಟ್ಟುತ್ತಾರೆ. ಆದ್ದರಿಂದ ಪಾಂಡವರನ್ನು ಶತ್ರುಗಳನ್ನಾಗಿ ಮಾಡಿಕೊಳ್ಳುವುದು ಮಿತ್ರರನ್ನಾಗಿ ಮಾಡಿಕೊಳ್ಳುವುದು ನಿನ್ನ ಕೈಯಲ್ಲಿದೆ. ವಿಚಾರಮಾಡಿನೋಡು. ಅವರೊಂದಿಗೆ ಯುದ್ಧ ಮಾಡುವುದನ್ನು ನಿಲ್ಲಿಸು.

ಮಗನೇ, ನೀನೊಬ್ಬನಿದ್ದರೆ ನಮಗೆ ಎಲ್ಲರೂ ಇದ್ದಂತೆ, ಉಳಿದ ಮಕ್ಕಳನ್ನು ನಿನ್ನ ಬದುಕಿನಲ್ಲಿ ಕಾಣುತ್ತೇವೆ. ಅವರ ಮರಣದಿಂದ ನಮಗೆ ಯಾವ ದುಃಖವೂ ಮನದಲ್ಲಿ ಇಲ್ಲ, ಅದು

ಹೇಗೆಂದರೆ ಹಗಲಿನಲ್ಲಿಯ ಸುರ್ಯನ ಬೆಳಕಿನ ಮುಂದೆ ಎಷ್ಟೇ ದೀಪಗಳು ಉರಿದರೂ ಅಷ್ಟೇ, ಉರಿಯದಿದ್ದರೂ ಅಷ್ಟೇ, ಅವುಗಳ ಬೆಳಕು ಸೂರ್ಯನ ಮುಂದೆ ಗೌಣ. ಅದರಂತೆ ನೀನು.

ಪಾಂಡವರು ತಮ್ಮ ತಂದೆಯ ಮಾತನ್ನು ಕೇಳುವಂತೆ ನನ್ನ ಮಾತನ್ನೂ ಕೇಳುವರು. ಅವರನ್ನು ನಾನು ಒಪ್ಪಿಸಿ ನೀನು ಹೇಳಿದಂತೆ ಅವರು ನಡೆದುಕೊಳ್ಳುವಂತೆ ಮಾಡುತ್ತೇನೆ. ಇದಕ್ಕೆ ಪ್ರತಿಭಟಿಸದೇ ಒಪ್ಪು. ನೀನಗೆ ಕೈಮುಗಿದು ಭೇಡಿಕೊಳ್ಳುತ್ತೇನೆ"ಎಂದು ಹೇಳುವನು.

2. ಧೃತರಾಷ್ಟ್ರ ಹಾಗೂ ಗಾಂಧಾರಿ ಇವರು ದುರ್ಯೋಧನನಿಗೆ ನಾವು ವಯೋವೃದ್ಧರು ಕುರುಡರು ಎನ್ನದೆ ಎಮ್ಮ ನುಡಿಗೇಳ್ ಎಂದು ಹೇಳುವ ಮಾತುಗಳ ಔಚಿತ್ಯವೇನು?

**ಅಥವಾ**

‘ಎಮ್ಮನುಡಿಗೇಳ್’ ಪದ್ಯದ ಸಾರಾಂಶವನ್ನು ನಿಮ್ಮ ಮಾತುಗಳಲ್ಲಿ ಬರೆಯಿರಿ.

VIJAYAPUR DISTRICT KANNADA SUBJECT FORUM

**ಅಥವಾ**

ದುರ್ಯೋಧನನ ತಂದೆ ತಾಯಿಯರು ಅವನನ್ನು ಸಂಧಿಗಾಗಿ ಪ್ರಾರ್ಥಿಸಿದ ರೀತಿಯನ್ನು ವಿವರಿಸಿ.

ವಯೋವೃದ್ಧರಾದ ತಂದೆ ತಾಯಿಗಳು ರಣರಂಗಕ್ಕೆ ಬಂ ದು ಸಂಧಿಗಾಗಿ ಪ್ರಾರ್ಥಿಸುವರು. ಧೃತರಾಷ್ಟನು ದುರ್ಯೋಧನನನ್ನು ಕುರಿತು "ಮಗನೇ ನನಗೂ ಪಾಂಡುವಿಗೂ ವ್ಯತ್ಯಾಸವಿಲ್ಲ. ರಾಜ್ಯವನ್ನು ವಿಭಾಗ ಮಾಡಿ ಆಳೋಣ. ಆ ಪಾಂಡುವಿನ ಮಕ್ಕಳು ನಿನ್ನಲ್ಲಿ ಹೊಂದಿಕೊಳ್ಳುತ್ತಾರೆ. ಭೀಷ್ಮನಿಗೆ, ದ್ರೋಣನಿಗೆ ಕರ್ಣನಿಗೆ ಗೆಲ್ಲಲು ಅಸಾಧ್ಯನಾದ ಆ ಅರ್ಜುನನಲ್ಲಿ ಯುದ್ಧ ಮಾಡುವವರು ಯಾರೂ ಇಲ್ಲ. ಯುದ್ಧದಲ್ಲಿ ಮಡಿದ ಮಕ್ಕಳ ಬಗ್ಗೆ ನಮ್ಮ ಮನಸ್ಸಿನಲ್ಲಿ ಏನೂ ದುಃಖವಿಲ್ಲ. ಅದು ಹೇಗೆಂದರೆ – ಹಗಲಿನಲ್ಲಿ ಸೂರ್ಯನೊಬ್ಬನೇ ಸಾಕು. ದೀವಿಗೆಗಳು ಉರಿದರೂ ಅಷ್ಟೇ, ನಂದಿದರೂ ಅಷ್ಟೆ ಪ್ರತಿಭಟಿಸದೆ ಸಂಧಿಗೆ ಒಪ್ಪಕೋ, ನಿನಗೆ ಕೈಯೊಡ್ಡಿ ಬೇಡುವೆನು" ಎಂದು ಹೇಳುತ್ತಾನೆ. ಆ ಮಾತಿಗೆ ಬೆಂಬಲವಾಗಿ ಗಾಂಧಾರಿಯು ದುರ್ಯೋಧನನನ್ನು ಕುರಿತು ಹೀಗೆ ಹೇಳುತ್ತಾಳೆ.

“ಕುರುವಂಶವೆಂಬ ತೋಟವು ಭೀಮನೆಂಬ ಆನೆಯು ಮದದಿಂದ ಕುರುಡಾಗಿ ಕೋಪಿಸಿ ನುಗ್ಗಲು ಧ್ವಂಸವಾದಂತೆ ಆಯಿತು. ಪುಣ್ಯದಿಂದ ಒಂದು ದೊಡ್ಡ ಮರವು ಉಳಿವಂತೆ ನೀನು ಉಳಿದಿರುವಿ. ಇನ್ನು ಯದ್ಧ ಮಾಡುವಂತವರು ಯಾರೂ ಉಳಿದಿಲ್ಲ. ಮಗನೇ ಮುದುಕರು ಕುರುಡರು ಎನದೆ ನಮ್ಮ ಮಾತನ್ನು ಕೇಳು. ಆಲೋಚಿಸಿ ತಂದೆಯ ಮಾತಿಗೆ ಒಪ್ಪಿಗೆ ಕೊಡು" ಎಂದಳು.

**ಈ ಕೆಳಗಿನ ಪ್ರಶ್ನೆಗಳಿಗೆ ಅಥವಾ ಅಪೂರ್ಣ ಹೇಳಿಕೆಗಳಿಗೆ ನಾಲ್ಕು ಪರ್ಯಾಯ ಉತ್ತರಗಳನ್ನು ಸೂಚಿಸಲಾಗಿದೆ. ಅವುಗಳಲ್ಲಿ ಹೆಚ್ಚು ಸೂಕ್ತವಾದ ಉತ್ತರವನ್ನು ಆರಿಸಿ, ಕ್ರಮಾಕ್ಷರದೊಂದಿಗೆ ಪೂರ್ಣ ಉತ್ತರವನ್ನು ಬರೆಯಿರಿ. (೧ಅಂಕ)**

1. ಗುರು ಲಘು ಮೂರಿರೆ :

ಎ) ಮ – ನ ಗಣ  ಬಿ) ಭ – ಯ ಗಣ  ಸಿ) ಜ – ರ ಗಣ  ಡಿ) ಸ – ತ ಗಣ

ಎ) ಮ – ನ ಗಣ

2. ಗುರು ಲಘು ಮೊದಲಲ್ಲಿ ಬರಲು :

ಎ) ಮ – ನ ಗಣ  ಬಿ) ಭ – ಯ ಗಣ  ಸಿ) ಜ – ರ ಗಣ  ಡಿ) ಸ – ತ ಗಣ

ಬಿ) ಭ – ಯ ಗಣ

3. ಗುರು ಲಘು ನಡುವಿರೆ :

ಎ) ಮ – ನ ಗಣ  ಬಿ) ಭ – ಯ ಗಣ  ಸಿ) ಜ – ರ ಗಣ  ಡಿ) ಸ – ತ ಗಣ

ಸಿ) ಜ – ರ ಗಣ

4. ಗುರು ಲಘು ಕೊನೆಯಲ್ಲಿ ಬರಲು :

ಎ) ಮ – ನ ಗಣ  ಬಿ) ಭ – ಯ ಗಣ  ಸಿ) ಜ – ರ ಗಣ  ಡಿ) ಸ – ತ ಗಣ

ಡಿ) ಸ – ತ ಗಣ

5. 'ಘಟಸಂಭೂತ, ಗಾಂಡೀವಿ, ಪವನ ನಂದನ' ಇವು ಈ ಸಮಾಸಕ್ಕೆ ಉದಾಹರಣೆ :

ಎ) ಕ್ರಿಯಾ ಸಮಾಸ  ಬಿ) ಅಂಶಿ ಸಮಾಸ  ಸಿ) ದ್ವಂದ್ವ ಸಮಾಸ  ಡಿ) ಬಹುವ್ರೀಹಿ ಸಮಾಸ

ಡಿ) ಬಹುವ್ರೀಹಿ ಸಮಾಸ

VIJAYAPUR DISTRICT KANNADA SUBJECT FORUM

6. 'ಪೆರ್ಮರ, ಪೆರ್ಮರ' ಇವು ಈ ಸಮಾಸಕ್ಕೆ ಉದಾಹರಣೆ :

ಎ) ತತ್ಪುರುಷ ಸಮಾಸ ಬಿ) ಕರ್ಮಧಾರೆಯ ಸಮಾಸ ಸಿ) ದ್ವಿಗು ಸಮಾಸ ಡಿ) ಗಮಕ ಸಮಾಸ

ಬಿ) ಕರ್ಮಧಾರೆಯ ಸಮಾಸ

7. 'ಮದಾಂಧ' ಪದವು ಸಮಾಸಕ್ಕೆ ಉದಾಹರಣೆ :

ಎ) ತತ್ಪುರುಷ ಸಮಾಸ ಬಿ) ದ್ವಂದ್ವ ಸಮಾಸ  ಸಿ) ಕ್ರಿಯಾ ಸಮಾಸ  ಡಿ) ಗಮಕ ಸಮಾಸ

8. 'ಕಯ್ಕೊಂಡ, ನುಡಿಗೇಳ್' ಪದಗಳು ಈ ಸಮಾಸಕ್ಕೆ ಉದಾಹರಣೆ :

ಎ) ತತ್ಪುರುಷ ಸಮಾಸ ಬಿ) ದ್ವಂದ್ವ ಸಮಾಸ  ಸಿ) ಕ್ರಿಯಾ ಸಮಾಸ  ಡಿ) ಗಮಕ ಸಮಾಸ

ಸಿ) ಕ್ರಿಯಾ ಸಮಾಸ

9. 'ಅಮೃತವರ್ಷಿ ಕರ' ಪದವು ಈ ಅಲಂಕಾರಕ್ಕೆ ಉದಾಹರಣೆ :

ಎ) ಉಪಮಾ  ಬಿ) ರೂಪಕ  ಸಿ) ಉತ್ಪ್ರೇಕ್ಷ  ಡಿ) ಶ್ಲೇಷಾಲಂಕಾರ

ಬಿ) ರೂಪಕ

10. 'ಗಾಂಡೀವಿಯೊಳ್' ಪದದಲ್ಲಿರುವ ವಿಭಕ್ತಿ :

ಎ) ಪ್ರಥಮಾ  ಬಿ) ತೃತೀಯಾ  ಸಿ) ಪಂಚಮಿ  ಡಿ) ಸಪ್ತಮಿ

ಡಿ) ಸಪ್ತಮಿ

11. 'ಪೆರ್ಮಗಂಗೆ' ಪದದಲ್ಲಿರುವ ವಿಭಕ್ತಿ :

ಎ) ದ್ವಿತಿಯಾ  ಬಿ) ತೃತೀಯಾ  ಸಿ) ಚತುರ್ಥಿ  ಡಿ) ಷಷ್ಠಿ

ಸಿ) ಚತುರ್ಥಿ

12. 'ನುಡಿಗೇಳ್' ಪದವು ಈ ಸಂಧಿಗೆ ಉದಾಹರಣೆಯಾಗಿದೆ :

ಎ) ಲೋಪಸಂಧಿ ಬಿ) ಆಗಮ ಸಂಧಿ ಸಿ) ಆದೇಶ ಸಂಧಿ ಡಿ) ಗುಣ ಸಂಧಿ

ಸಿ) ಆದೇಶ ಸಂಧಿ

13. 'ಉತ್ತಮಾಂಗ' ಪದವು ಈ ಸಂಧಿಗೆ ಉದಾಹರಣೆಯಾಗಿದೆ :

ಎ) ಸವರ್ಣದೀರ್ಘ ಬಿ) ಗುಣ ಸಂಧಿ ಸಿ) ವೃದ್ಧಿ ಸಂಧಿ ಡಿ) ಯಣ್ ಸಂಧಿ

ಎ) ಸವರ್ಣದೀರ್ಘ

14. 'ಪಚ್ಚೆ' ಪದದ ಹೊಸಗನ್ನಡ ರೂಪ :

ಎ) ಪರಚಿ ಬಿ) ಹಂಚಿ ಸಿ)ಪರಸಿ ಡಿ) ಹರಸಿ

ಬಿ) ಹಂಚಿ

15. ಕಂದಪದ್ಯದಲ್ಲಿರುವ ಒಟ್ಟು ಮಾತ್ರೆಗಳ ಸಂಖ್ಯೆ:

ಎ) 144 ಬಿ) 102 ಸಿ) 32 ಡಿ) 64

ಡಿ) 64

VIJAYAPUR DISTRICT KANNADA SUBJECT FORUM

**ಈ ಕೆಳಗಿನವುಗಳಲ್ಲಿ ಮೊದಲೆರಡು ಪದಗಳಿಗೆ ಇರುವ ಸಂಬಂಧದಂತೆ ಮೂರನೆಯ ಪದಕ್ಕೆ ಸರಿಹೊಂದುವ ಬಂಧೀ ಪದವನ್ನು ಬರೆಯಿರಿ : (೧ ಅಂಕ)**

1. ಗುರುವೊಂದಾದಿಯೊಳ್ ; ಉತ್ಪಲಂ :: ಗುರುಮೊದಲ್ ಮೂರಾಗೆ ; ……… ಶಾರ್ದೂಲಮಾ
2. ಗುರುನಾಲ್ಕಾಗಿರಲು ; ಸ್ರಗ್ಧರೆ :: ಲಘು ದ್ವಂದ್ವಂ ಗುರುದ್ವಂದ್ವಂ ಮಾಗಿರೆ ;……….ಮತ್ತೇಭ
3. ಲಘುದ್ವಯತ್ರಿಗುರುವಿಂದಕ್ಕುಂ ; ಮಹಾಸ್ರಗ್ಧರಾ :: ಲಘು ನಾಲ್ಕು ;……….. ಚಂಪಕಮಾಲೆ
4. ಉತ್ತಮಾಂಗ ; ತಲೆ :: ಸೈದರೆ ;………………… ಹೊಂದಿಕೊಂಡರೆ
5. ಭಾನು ; ಸೂರ್ಯ :: ಬಾನು ;………………… ಆಕಾಶ
6. ಪವನನಂದನ ; ಭೀಮ :: ಕುರುಕುಳನಂದನ ;…………… ದುರ್ಯೋಧನ
7. ಅಮೃತ ; ಅಮರ್ದು :: ಕಾರ್ಯ ; ………….. ಕಜ್ಜ
8. ಪುಣ್ಯ ; ಪುಣ್ಯ :: ದೀವಿಗೆ ; ………….. ದೀಪಿಕಾ

**ಈ ಕೆಳಗಿನ ಪದ್ಯಭಾಗಕ್ಕೆ ಪ್ರಸ್ತಾರ ಹಾಕಿ, ಗಣ ವಿಭಾಗ ಮಾಡಿ, ಛಂದಸ್ಸಿನ ಹೆಸರನ್ನು ಬರೆಯಿರಿ: (೩ ಅಂಕ)**

**1.** ಎನಗಂ ಪಾಂಡುಗಮಿಲ್ಲ ಭೇದಮಿಳೆಯಂ ಪಚ್ಚಾಳ್ವಮಾ ಪಾಂಡುನಂ

| ಸ | ಭ | ರ | ನ | ಮ | ಯ | ಲ ಗು |
|---|---|---|---|---|---|---|
| UU– | –UU | – U – | UUU | – – – | U – – | U – |
| ಎನಗಂ | ಪಾಂಡುಗ | ಮಿಲ್ಲ ಭೇ | ದಮಿಳೆ | ಯಂ ಪಚ್ಚಾ | ಳ್ವಮಾ ಪಾಂ | ಡುನಂ |

ಸಭರಂನಂಮಯಲಂಗಮುಂ ಬಗೆಗೊಳಲ್ ಮತ್ತೇಭವಿಕ್ರೀಡಿತಂ.

ಇದು ಅಕ್ಷರ ಗಣ ಛಂದಸ್ಸಿನ ಮತ್ತೇಭವಿಕ್ರೀಡಿತ ವೃತ್ತದ ಲಕ್ಷ್ಯವಾಗಿದೆ.

2. ಕುರುಕುಳನಂದನಂ ಪವನನಂದನನೆಂಬ ಮದಾಂಧಗಂಧಸಿಂ

ನ | ಜ | ಭ | ಜ | ಜ | ಜ | ರ

UUU | U–U |– UU | U–U |U–U | U– U | –U–

ಕುರುಕು|ಳನಂದ|ನಂ ಪವ|ನನಂದ|ನನೆಂಬ| ಮದಾಂಧ|ಗಂಧಸಿಂ

ನಜಭಜಜಂಜರಂ ಬಗೆಗೊಳ್ಳುತ್ತಿರೆ ಚಂಪಕಮಾಲೆ ಎಂದಪರ್.

ಇದು ಅಕ್ಷರ ಗಣ ಛಂದಸ್ಸಿನ ಚಂಪಕಮಾಲಾವೃತ್ತದ ಲಕ್ಷ್ಯವಾಗಿದೆ.

3. ನೀನುಳ್ಳೊಡೆಲ್ಲರೊಳರೆಮ

ಗೇನುಮಟಿಲ್ ಮನದೊಳಿಲ್ಲದಂತೆನೆ ಮಗನೇ

VIJAYAPUR DISTRICT KANNADA SUBJECT FORUM

– – | U – U | UUUU

ನೀನು|ಳ್ಳೊಡೆಲ್ಲ|ರೊಳರೆಮ =12

–UU | – UU| U – U|– UU| UU –

ಗೇನುಮ|ಟಿಲ್ ಮನ|ದೊಳಿಲ್ಲ|ದಂತೆನೆ| ಮಗನೇ =20

ಇದು ಮಾತ್ರಾ ಗಣ ಛಂದಸ್ಸಿನ ಕಂದಪದ್ಯದಲ್ಲಿ ರಚಿತವಾಗಿದೆ.

**ಈ ಕೆಳಗಿನ ವಾಕ್ಯದಲ್ಲಿರುವ ಅಲಂಕಾರವನ್ನು ಹೆಸರಿಸಿ, ಲಕ್ಷಣ ಬರೆದು ಸಮನ್ವಯಿಸಿ : (೩ ಅಂಕ)**

1. "ಪುಣ್ಯದೊಂದು ಪೆರ್ಮರನುಳಿವಂತೆ ನೀನುಳಿದೆಯಿನ್ನಿರಿವನ್ನರುಮಿಲ್ಲ"

**ಅಲಂಕಾರದ ಹೆಸರು** : ಉಪಮಾ ಅಲಂಕಾರ.

**ಲಕ್ಷಣ** : ಎರಡು ವಸ್ತು ಅಥವಾ ಸನ್ನಿವೇಶಗಳಿಗೆ ಪರಸ್ಪರ ಹೋಲಿಸಿ ವರ್ಣಿಸಿದರೆ ಅದು ಉಪಮಾ ಅಲಂಕಾರ.

**ಉಪಮೇಯ** : ನೀನು (ದುರ್ಯೋಧನ)

**ಉಪಮಾನ** : ಪೆರ್ಮರ.

**ಉಪಮಾವಾಚಕ ಪದ** : ಅಂತೆ.

**ಸಮಾನ ಧರ್ಮ** : ಬದುಕುಳಿಯುವುದು.

**ಸಮನ್ವಯ** : ಇಲ್ಲಿ ಉಪಮೇಯವಾದ ನೀನು (ದುರ್ಯೋಧನ) ಉಪಮಾನವಾದ ಪೆರ್ಮರಕ್ಕೆ ಅಂತೆ ಎಂಬ ವಾಚಕದ ಮೂಲಕ ಹೋಲಿಸಿ ಬದುಕುಳಿಯುವುದು ಎಂಬ ಸಾಧಾರಣ ಧರ್ಮವನ್ನು ಹೇಳಿರುವುದರಿಂದ ಇದು ಪೂರ್ಣೋಪಮಾಲಂಕಾರ.

**ಈ ಕೆಳಗೆ ಕೊಟ್ಟಿರುವ ಗಾದೆಗಳಲ್ಲಿ ಯಾವುದಾದರೂ ಒಂದನ್ನು ವಿಸ್ತರಿಸಿ ಬರೆಯಿರಿ : (೩ ಅಂಕ)**

1. ಸಿಟ್ಟು ತನ್ನ ವೈರಿ ಶಾಂತಿ ಪರರ ವೈರಿ. 2. ತಾಯಿಗಿಂತ ಬಂಧುವಿಲ್ಲ, ಉಪ್ಪಿಗಿಂತ ರುಚಿಯಿಲ್ಲ.

3. ಬೆಳೆಯುವ ಸಿರಿ ಮೊಳಕೆಯಲ್ಲಿ ನೋಡು.